ಅ) ಹುಬ್ಬಳ್ಳಿ ಧಾರವಾಡ ಮಹಾನಗರದ ಸಾರಿಗೆ ಘಟಕ ಲಾಭದಲ್ಲಿದೆಯೇ? ಅಥವಾ ನಷ್ಟದಲ್ಲಿದೆಯೇ?

ಆ) ಹಾಗಿದ್ದಲ್ಲಿ ಕಳೆದ ಪರ್ಷ ಆದ ಲಾಭವೆಷ್ಟು;ಅಥವಾ ನಷ್ಟವೇಷ್ಟು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು):

ಅ) 1994-95ನೇ ಸಾಲಿನಲ್ಲಿ ಹುಬ್ಬಳ್ಳಿ ವಿಭಾಗದ ಹುಬ್ಬಳ್ಳಿ (ನಗರ) ಮತ್ತು ಧಾರವಾಡ ಘಟಕಗಳು ನಷ್ಟದಲ್ಲಿರುತ್ತವೆ.

ಆ) 1994-96ನೇ ಸಾಲಿನಲ್ಲಿ ಹುಬ್ಬಳ್ಳಿ (ನಗರ) ಘಟಕವು 247.78 ಲಕ್ಷ ರೂ ಮತ್ತು ಧಾರವಾಡ ಘಟಕವು 163.64 ಲಕ್ಷ ರೂ.ಗಳ ನಷ್ಟವನ್ನು ಅನುಭವಿಸಿರುತ್ತವೆ.

ಹುಬ್ಬಳ್ಳಿ ಸಿಟಿ ಸರ್ವೆ ಕಛೇರಿಯಲ್ಲಿ ಆರ್.ಟಿ.ಎಸ್. ಪ್ರಕರಣಗಳ ಕುರಿತು.

918-ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ಸಿಟಿ ಸರ್ವೆ ಕಛೇರಿಯಲ್ಲಿ 1992 ಜನವರಿಯಿಂದ ಜುಲೈ 1995ರವರೆಗೆ ಎಷ್ಟು ಆರ್.ಟಿ.ಎಸ್ ಪ್ರಕರಣಗಳು ದಾಖಲಾಗಿವೆ?

ಆ) ಅವುಗಳಲ್ಲಿ ಎಷ್ಟು ಪ್ರಕರಣಗಳು ತೀರ್ಮಾನವಾಗಿವೆ ಮತ್ತು ಚಾಲ್ತಿಯಲ್ಲಿರುವ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು)

ಅ) 65

ಆ) 55 ಪ್ರಕರಣಗಳು ತೀರ್ಮಾನವಾಗಿವೆ.

ಇ) 10 ಪ್ರಕರಣಗಳು ಬಾಕಿ ಇವೆ.

ಹುಬ್ಬಳ್ಳಿ-ಧಾರವಾಡ ಮಧ್ಯದ ರಸ್ತೆಗಳ ಅಪಘಾತಗಳ ಬಗ್ಗೆ

925-ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ-ಧಾರವಾಡ ಮಧ್ಯದ ರಸ್ತೆಯಲ್ಲಿ ವಾಹನ ಅಪಘಾತಗಳು ಜಾಸ್ತಿಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ತಡೆಗಟ್ಟಲು ಸರ್ಕಾರದ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು)

ಅ) ಹೌದು

1) ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತಿಸಿ ಸಂಚಾರಿ ಪೋಲೀಸರನ್ನು ಕರ್ತವ್ಯಕ್ಕೆ ನೇಮಿಸಲಾಗಿದೆ.

2) ಅಪಘಾತ ಸಂಭವಿಸುವ ಸ್ಥಳಗಳಲ್ಲಿ ಸಂಚಾರ ಸಂಕೇತಗಳನ್ನು ಅಳವಡಿಸಲಾಗಿದೆ.

3) ವೇಗವಾಗಿ ಹೋಗುವ ವಾಹನ ಹಾಗೂ ಮದ್ಯಪಾನ ಮತ್ತು ಚಾಲಕರನ್ನು ತಪಾಸಣೆ ಮಾಡಲಾಗುತ್ತಿದೆ.

ತೋಟಗಾರಿಕಾ ಫಾರಂಗಳ ಆದಾಯ-ವೆಚ್ಚ

1281- ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ತೋಟಗಾರಿಕೆ ಇಲಾಖಾ ಫಾರಂಗಳಲ್ಲಿ ವೆಚ್ಚಕ್ಕಿಂತ ಆದಾಯ ಹೆಚ್ಚಿರುವುಗಳು ಯಾವುವು?

ಆ) ತೀರ್ಥಹಳ್ಳಿಯಲ್ಲಿರುವ ರಾಜ್ಯ ವಲಯದ ತೋಟಗಾರಿಕೆ ಇಲಾಖಾ ಫಾರಂಗಳಲ್ಲಿ 1992-93, 93-94 ಮತ್ತು 94-95ನೇ ಸಾಲುಗಳಲ್ಲಿ ಬಂದ ವಾರ್ಷಿಕ ಉತ್ಪನ್ನದ ಹಣ ಎಷ್ಟು? ಈ ಫಾರ್ಂಗಳ ಅಭಿವೃದ್ಧಿಗಾಗಿ ಈ ವರ್ಷಗಳಲ್ಲಿ ವ್ಯಯಿಸಿದ ಹಣ ಎಷ್ಟು?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು):

ಅ) ಪಟ್ಟಿಯನ್ನು ಲಗತ್ತಿಸಿದೆ.

		1992-93		1993-94		1994-95	
		ವೆಚ್ಚ	ಆದಾಯ	ವೆಚ್ಚ	ಆದಾಯ	ವೆಚ್ಚ	ಆದಾಯ
ಅ)	ಶೀಬಿನಕೆರೆ ತೋಟಗಾರಿಕೆ ಕ್ಷೇತ್ರ, ತೀರ್ಥಹಳ್ಳಿ	54630.00	969549.00	52380.00	265819.00	60000.00	751276.00
ಆ)	ಕುರುವನಹಳ್ಳಿ ತೋಟಗಾರಿಕೆ ಕ್ಷೇತ್ರ, ತೀರ್ಥಹಳ್ಳಿ	53240.00	801472.00	51320.00	801492.00	60000.00	715094.00

ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ಫಾರಂಗಳಲ್ಲಿ 1994-95ನೇ ಸಾಲಿನಲ್ಲಿ ವೆಚ್ಚಕ್ಕಿಂತ ಆದಾಯ ಹೆಚ್ಚಿರುವ ವಿವರದ ಪಟ್ಟಿ

ಕ್ರ. ಸಂ.	ತೋಟಗಾರಿಕೆ ಕ್ಷೇತ್ರಗಳು	ಭರಿಸಿರುವ ವೆಚ್ಚ	ಪಡೆದಿರುವ ಆದಾಯ
1)	ನಾಪೋಕ್ಲು	51069-00	65896-00
2)	ಹಿಸತೋನಿ (ರಾವ) ಚಿಕ್ಕಮಗಳೂರು	17007-00	72892-00
3)	ಸತೋನಿ, ಮೂಡಿಗೆರೆ	60665-00	166560-00